**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**Spl.C. 78/2019**

**P.W.-7**
**C.W.-5**

| | | |
|---|---|---|
| ಹೆಸರು | : | Sister Teresa Bande |
| ತಂದೆಯ ಹೆಸರು | : | Bande Jojappa |
| ವಯಸ್ಸು | : | 65 ವರ್ಷ |
| ಉದ್ಯೋಗ | : | Assistance to cook |
| ವಾಸಸ್ಥಳ | : | Montesilvano , Italy |

Co-ordinator Sister Saritha present through VC.

**ದಿನಾಂಕಃ 20.01.2025 ರಂದು ಸಾಕ್ಷಿಯನ್ನು ವಿಸಿ ಮೂಲ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ನಾನು ಮೈಸೂರಿನ ರಾಜೇಂದ್ರ ನಗರದಲ್ಲಿ ಇರುವ ಕಾರ್ಮೆಲೈಟ್ ತೆರೇಸಿಯನ್ Sisters, ನಂ. 9 ರಲ್ಲಿ Superior ಆಗಿ 1998 ರಿಂದ 2010 ರವರೆಗೆ ಕೆಲಸ ಮಾಡುತ್ತಿದ್ದೆ.

2. ನಮ್ಮ ಸಂಸ್ಥೆಗೆ ಮೈಸೂರು ಜಿಲ್ಲೆಯ ರಾಜೇಂದ್ರ ನಗರದ ಹಳೆ ಕೆಸರೆ ಗ್ರಾಮದ ಸರ್ವೆ ನಂ. 610/4 ಮತ್ತು 610/6 ರಲ್ಲಿ ಒಟ್ಟು 1 ಎಕರೆ 30 ಗುಂಟೆ ಜಮೀನು ಇತ್ತು. ಸದರಿ ಸ್ವತ್ತಿನ ಭೂ ಪರಿವರ್ತನೆಗಾಗಿ ಅರ್ಜಿಯನ್ನು ಡಿ.ಲಿಂಗರಾಜು ಎನ್ನುವವರಿಗೆ ಕೊಟ್ಟಿದ್ದೆ.

ಸದರಿಯವರಿಗೆ ನಾನು ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. ಡಿ.ಲಿಂಗರಾಜು ರವರಿಗೆ ಸರ್ಕಾರಕ್ಕಾಗಿ ಕಟ್ಟಬೇಕಾದ ಹಣ ಎಂದು ರೂ.15,000/- ಗಳನ್ನು ನೀಡಿದ್ದೆ. ಆರೋಪಿ ನಾಗೇಶ್ ಕುಮಾರ್ ಈ ಭೂ ಪರಿವರ್ತನೆಗಾಗಿ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ ಎಂದು ನನ್ನಲ್ಲಿ ಹೇಳಿರುವುದಿಲ್ಲ ಮತ್ತು ಈ ಸಂಬಂಧ ನನ್ನಿಂದ ಅವರು ಹಣ ಪಡೆದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ವಿಶೇಷ ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ -</u>**

3. ಡಿ.ಲಿಂಗರಾಜು ರವರು ನನ್ನಿಂದ ಒಂದು ಸಾಮಾನ್ಯ ಅಧಿಕಾರ ಪತ್ರವನ್ನು ಪಡೆದುಕೊಂಡು ಹೋದರು ಎನ್ನುವುದು ಸರಿಯಲ್ಲ. ಮೇಲ್ಕಂಡ ಜಮೀನಿನ ಭೂ ಪರಿವರ್ತನೆಗೆ ಸಂಬಂಧಿಸಿದಂತೆ ವರದಿ ನೀಡಲು ಲಿಂಗರಾಜು ರವರ ಬಳಿಯಲ್ಲಿ ನಾಗೇಶ್ ಕುಮಾರ್ ರವರು ರೂ. 55,000/- ಲಂಚದ ಹಣಕ್ಕೆ ಒತ್ತಾಯಿಸಿ , ರೂ.15,000/- ಗಳನ್ನು ಪಡೆದು ಉಳಿಕೆ ರೂ.40,000/- ಗಳ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ ಎಂದು ಲಿಂಗರಾಜು ನ್ನನ್ನಲ್ಲಿ ತಿಳಿಸಿದರು ಎನ್ನುವುದು ಸರಿಯಲ್ಲ. ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವಂತೆ ನಾನು ಡಿ.ಲಿಂಗರಾಜು ರವರಿಗೆ ತಿಳಿಸಿರುತ್ತೇನೆ ಎನ್ನುವುದು ಸರಿಯಲ್ಲ. ಅದರಂತೆ ಡಿ.ಲಿಂಗರಾಜು ರವರು ದಿಃ 14.07.2017 ರಂದು ಮೈಸೂರು ಎಸಿಬಿ ಪೋಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ ಎನ್ನುವುದು ಸರಿಯಲ್ಲ. ನಂತರ ಆರೋಪಿ ನಾಗೇಶ್ ಕುಮಾರ್ , ಡಿ.ಲಿಂಗರಾಜುರವರಿಂದ ಮೈಸೂರು ತಾಲ್ಲೂಕು ಕಛೇರಿಯಲ್ಲಿ ರೂ.30,000/- ವನ್ನು ಪಡೆಯುವಾಗ ಟ್ರಾಪ್ ಆಗಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

**Spl.C.No.78/2019**
**P.W.-7**
**C.W.-5**

4. ಈಗ ಓದಿ ಹೇಳಿದಂತೆ ಅಂದರೆ "......... ಡಿ.ಲಿಂಗರಾಜು ರವರು ಈಗ್ಗೆ 2 ದಿನಗಳ ಹಿಂದೆ ................. ಈ ಬಗ್ಗೆ ಲಿಂಗರಾಜು ರವರು ನನಗೆ ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ " ಎಂದು ಎಸಿಬಿ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 26 ಎಂದು ಗುರುತುಪಡಿಸಿಕೊಳ್ಳಲಾಯಿತು.

5. ನಾನು ಡಿ.ಲಿಂಗರಾಜು ರವರಿಗೆ ಒಂದು ಅಧಿಕಾರ ಪತ್ರವನ್ನು ಬರೆದುಕೊಟ್ಟಿ ಸಹಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ.

6. ನಾನು ಡಿ.ಲಿಂಗರಾಜು ರವರಿಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದರೂ ಸಹ , ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಡಿ.ಲಿಂಗರಾಜು ರವರು ಆರೋಪಿ ಲಂಚದ ಹಣಕ್ಕೆ ಬೇಡಿಕೆ ಇಟ್ಟದ್ದನ್ನು ನನಗೆ ಹೇಳಿದ್ದರೂ ಸಹ , ಈ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಂತರ ಆರೋಪಿ ನಾಗೇಶ್ ಕುಮಾರ್ ಲಂಚದ ಹಣವನ್ನು ಪಡೆಯುವಾಗ ಟ್ರಾಪ್ ಆದ ಬಗ್ಗೆ ನನಗೆ ಗೊತ್ತಾಗಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ನಾನು ಡಿ.ಲಿಂಗರಾಜು ರವರಿಗೆ ಕೊಟ್ಟಿದ್ದ ರೂ.15,000/- ಆರೋಪಿಗೆ ಕೊಡಬೇಕಾಗಿದ್ದ ಲಂಚದ ಹಣವಾಗಿತ್ತು ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ – ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.